# ದೈವತ್ವವಿಲ್ಲದ ದೇವಕಣ

**ದೇವಕಣ ಎಂಬುದು ಮೂಲಪದವಲ್ಲ. ದೇವರೇ ಇದನ್ನು ಸೃಷ್ಟಿಸಿ ಈ ಕಣದ ರೂಪದಲ್ಲಿ ಇಟ್ಟಿದ್ದೂ ಅಲ್ಲ!**

■ ಎಂ. ಅಬ್ದುಲ್ ರೆಹಮಾನ್ ಪಾಷ

ನನ್ನ ದೈನಂದಿನ ಕೆಲಸ ಕಾರ್ಯಗಳಲ್ಲಿ 'ವೈಜ್ಞಾನಿಕ ಮನೋವೃತ್ತಿ ಬೆಳೆಸಿಕೊಳ್ಳುವುದು ಹೇಗೆ' ಎನ್ನುವುದರ ಕುರಿತು ಸಹಭಾಗಿ ಕಾರ್ಯಶಿಬಿರಗಳನ್ನು ನಡೆಸುವುದು ಬಹಳ ಇಷ್ಟದ ಕೆಲಸ. ಇಂಥ ಒಂದು ಶಿಬಿರದಲ್ಲಿ ಭೌತಿಕ ವಿಶ್ವಕ್ಕೂ ದೇವರು, ಧರ್ಮ, ಆಧ್ಯಾತ್ಮ ಎಂಬ ಅಲೌಕಿಕ ವಿಚಾರಗಳಿಗೂ ನೇರವಾದ ಸಂಬಂಧವಿಲ್ಲ ಎಂಬ ರೀತಿಯಲ್ಲಿ ಚರ್ಚೆ ಮಾಡುತ್ತಿರುವಾಗ, ಒಬ್ಬ ಶಿಬಿರಾರ್ಥಿ, 'ವಿಜ್ಞಾನಿಗಳೇ ಒಪ್ಪಿಕೊಂಡಿರುವ ಹಾಗೆ ದೇವಕಣ ಎಂಬುದೊಂದು ಇದೆ. ವಿಶ್ವದ ಸೃಷ್ಟಿಯಲ್ಲಿ ಅದು ಅತ್ಯಂತ ಮೂಲಭೂತವಾದದ್ದು ಎನ್ನಲಾಗುತ್ತದೆ. ದೇವರು ತನ್ನ ರುಜುವಾತನ್ನು ಈ ಕಣದ ರೂಪದಲ್ಲಿ ಇಟ್ಟಿದ್ದಾನೆ. ವಿಜ್ಞಾನಿಗಳು ಈಗ ಅದನ್ನು ಕಂಡುಕೊಂಡಿದ್ದಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದು ಪ್ರಶ್ನಿಸಿದರು.

ಇತ್ತೀಚಿನ ಒಂದು ಪ್ರವೃತ್ತಿ ಎಂದರೆ, ಹಳೆಯ ಸಾಂಪ್ರದಾಯಿಕ ನಂಬಿಕೆ ಮತ್ತು ಆಚರಣೆಗಳಿಗೆ ವೈಜ್ಞಾನಿಕ ಆಧಾರಗಳನ್ನು ಹುಡುಕಿ ಹೇಳುವ ಹವ್ಯಾಸ. ಸಂಪ್ರದಾಯವನ್ನು ಅದರ ಹೆಸರಿನಲ್ಲಿಯೇ ಅನುಸರಿಸುವುದರಲ್ಲಿ ಯಾವುದೇ ಅಭ್ಯಂತರವಿಲ್ಲ. ವೈಜ್ಞಾನಿಕ ಮನೋವೃತ್ತಿ ಉಳ್ಳವರು ಯಾರೂ ಇದನ್ನು ಪ್ರಶ್ನಿಸಲಾರರು. ಹಿಂದೆ ಇದ್ದಿರಬಹುದಾದರೂ ಈಗ ತನ್ನ ವೈಚಾರಿಕ ಆಧಾರಗಳನ್ನು ಕಳೆದುಕೊಂಡಿರುವ ತಮ್ಮ ಆಚರಣೆಗಳಿಗೆ, ವೈಜ್ಞಾನಿಕ ಆಧಾರಗಳನ್ನು ಕಂಡುಕೊಂಡು, ತಾವೂ ವೈಜ್ಞಾನಿಕ ಮನೋವೃತ್ತಿ ಉಳ್ಳವರೇ ಎಂದು ಸಮಾಧಾನ ಮಾಡಿಕೊಳ್ಳುವ ಹಂಬಲಿಕೆ ಕೆಲವರಿಗೆ! ಮಾಧ್ಯಮಗಳಲ್ಲಿ, ಮುಖ್ಯವಾಗಿ ಟಿವಿ ವಾಹಿನಿಗಳಲ್ಲಿ ಹಸಿ ಹಸಿ ಸುಳ್ಳನ್ನು ಶಾಸ್ತ್ರೀಯವಾದ ಭಾಷೆಯಲ್ಲಿ ಹೇಳುವ ರಾಶಿಭವಿಷ್ಯ, ಸಂಖ್ಯಾಶಾಸ್ತ್ರ, ವಾಸ್ತು ಪಂಡಿತರಿಗೂ ಈ ಗೀಳು ಇದೆ. ಅವರು ಆಗಾಗ 'ವೈಜ್ಞಾನಿಕವಾಗಿ ಸಾಬೀತಾಗಿದೆ; ವಿಜ್ಞಾನಿಗಳೇ ಒಪ್ಪಿಕೊಂಡಿದ್ದಾರೆ, ಸಂಶೋಧನೆಗಳ ಪ್ರಕಾರ' ಎಂದು ಹೇಳಿಕೊಳ್ಳುತ್ತಲೇ ಇರುತ್ತಾರೆ! ಹೀಗೆ ಹೇಳುವಾಗಲೂ ಮೂಲಭೂತ ವೈಜ್ಞಾನಿಕ ಸತ್ಯ, ಸಂಶೋಧನೆಗಳನ್ನು ಅವರು ಅರೆಬರೆಯಾಗಿ ತಿಳಿದುಕೊಂಡಿರುತ್ತಾರೆ; ಇಲ್ಲವೇ ಬೇಕೆಂದೇ ತಮ್ಮ ಅನುಕೂಲಕ್ಕೆ ತಿರುಚಿಕೊಂಡು ಹೇಳುತ್ತಾರೆ.

ದೇವಕಣದ ಕುರಿತು ಒಬ್ಬ ಮಹಿಳಾ ಭಾಗಿ ಕೇಳಿದ ಪ್ರಶ್ನೆ ನಮ್ಮ ಶಿಬಿರಗಳಲ್ಲಿ ಹಲವು ಬಾರಿ ಎದುರಾಗಿದೆ. ಕೇಳುವವರು ಬಹಳ ಗಟ್ಟಿಯಾದ ವಿಶ್ವಾಸದಿಂದ ಆ ಪ್ರಶ್ನೆ ಕೇಳಿರುತ್ತಾರೆ. ಆ ಹೊತ್ತಿಗೆ ಸಂಕ್ಷಿಪ್ತವಾದ ಉತ್ತರವನ್ನು ನೀಡಿದ್ದರೂ, ನನಗೂ ಈ ಕುರಿತು ಹೆಚ್ಚಿನ ಮಾಹಿತಿ ಇದೆ ಎಂದು ನನಗನ್ನಿಸಿರಲಿಲ್ಲ. ಅದಕ್ಕೇ ಈ ಕಲಿಕೆ, ನಿಮ್ಮೊಂದಿಗೆ.

ಮೊದಲನೆಯದಾಗಿ ದೇವಕಣ ಎಂಬುದು ಮೂಲಪದವಲ್ಲ. ಇದು ಇಂಗ್ಲಿಷಿನ God Particle ಎಂಬ ಪದದ ಅನುವಾದ. ಭಾಷಾಂತರವೂ ಪದಶಃ ಆಗಿದೆಯೇ ವಿನಃ ಮೂಲಪದ 'ಗಾಡ್ ಪಾರ್ಟಿಕಲ್' ಎಂಬ ಪದಪುಂಜದಲ್ಲಿ ಉದ್ದೇಶಿತವಾಗಿರುವ ಅರ್ಥವಾಗಲೀ, ಅದರ ಐತಿಹಾಸಿಕ ಹಿನ್ನೆಲೆಯಾಗಲೀ ದೇವಕಣ ಎಂಬ ಪದದಲ್ಲಿ ಉಳಿದುಬಂದಿಲ್ಲ. ಆದ್ದರಿಂದ, ದೇವಕಣವನ್ನು ಕೈಬಿಟ್ಟು 'ಗಾಡ್ ಪಾರ್ಟಿಕಲ್' ಎಂಬ ಪದದ ಬೆನ್ನು ಹತ್ತಿ ಸತ್ಯವನ್ನು ಹುಡುಕೋಣ. ಯಾವ ಕಣಕ್ಕೆ 'ಗಾಡ್ ಪಾರ್ಟಿಕಲ್' ಎಂಬ ಹೆಸರು ಬಂತು, ಅದರ ಗುಣಲಕ್ಷಣವೇನು ಎಂಬುದನ್ನು ತಿಳಿಯೋಣ.

### ಹಿಗ್ಸ್ ಬೋಸಾನ್ ಕಣ

ಗಾಡ್ ಪಾರ್ಟಿಕಲ್ ಎಂಬುದು ಹಿಗ್ಸ್ ಬೋಸಾನ್ ಎಂಬ ಮೂಲಕಣದ ಅಡ್ಡಹೆಸರು. ವಿಶ್ವದಲ್ಲಿ ಈ ಕಣದ ಇರುವಿಕೆಯನ್ನು 1964ರಷ್ಟು ಹಿಂದೆಯೇ ಮೊಟ್ಟ ಮೊದಲಿಗೆ ಮುಂಗಂಡವರು ಬ್ರಿಟಿಷ್ ಭೌತವಿಜ್ಞಾನಿ ಪೀಟರ್ ಹಿಗ್ಸ್ ಎಂಬುವರು. ಇದರ ಮಹತ್ವದ ಕುರಿತು ಇನ್ನೊಬ್ಬ ನೊಬೆಲ್ ಪುರಸ್ಕೃತ ಭೌತವಿಜ್ಞಾನಿ ಯುನೈಟೆಡ್ ಸ್ಟೇಟ್ಸ್‌ನ ಲಿಯೋನ್ ಎಂ.ಲೆಡರ್‌ಮನ್ 1993ರಲ್ಲಿ ಒಂದು ಪುಸ್ತಕ ಬರೆದರು. ಆಧುನಿಕ ಭೌತ ವಿಜ್ಞಾನಕ್ಕೆ ಅತ್ಯಂತ ಮೂಲಭೂತವಾದದ್ದು, ದ್ರವ್ಯದ (ಮ್ಯಾಟರ್) ರಚನೆಯನ್ನು ಅರ್ಥ ಮಾಡಿಕೊಳ್ಳಲು ಅತ್ಯಂತ ಅನಿವಾರ್ಯವಾದದ್ದು ಆಗಿದ್ದರೂ ವರ್ಷಗಟ್ಟಲೇ ಕೈಗೆ ಸಿಗದೇ ತಪ್ಪಿಸಿಕೊಳ್ಳುತ್ತಿದ್ದ ಕಿಲಾಡಿ ಕಣ ಎಂಬ ಭಾವನೆಯನ್ನು ವ್ಯಕ್ತಪಡಿಸಲು ಅವರು ಈ ಕಣಕ್ಕೊಂದು ಅಡ್ಡ ಹೆಸರು ಕೊಟ್ಟರು. ಅದೇ, ಗಾಡ್‌ಡ್ಯಾಮ್ನ್ ಪಾರ್ಟಿಕಲ್ (goddamn particle) ಎಂದು.

ಗ್ರಾಮ್ಯ ಮಾತಿನಲ್ಲಿ ನಾವು ಒಮ್ಮೊಮ್ಮೆ ಹತಾಶೆಯಿಂದ ಬಯ್ಯುವಾಗ, 'ಈ...ನನ್ ಮಗಂದು, ದರಿದ್ರಂದು' ಎನ್ನುತ್ತೇವಲ್ಲ, ಸುಮಾರು ಆ ಅರ್ಥದಲ್ಲಿ. ಪುಸ್ತಕದ ಶೀರ್ಷಿಕೆಯಲ್ಲಿಯೂ ಲೆಡರ್‌ಮನ್ ಇದೇ ಹೆಸರನ್ನು ಇಟ್ಟುಕೊಂಡಿದ್ದರು. ಆದರೆ ಅವರ ಪ್ರಕಾಶಕರು ಅದು ತೀರಾ ಲಘು ಆಗುತ್ತದೆಂದು ಈ ಹೆಸರಿಗೆ ಆಕ್ಷೇಪ ವ್ಯಕ್ತಪಡಿಸಿದರು. ಕೊನೆಗೂ ಅವರ ಒತ್ತಾಯಕ್ಕೆ ಮಣಿದು ಲೆಡರ್‌ಮನ್, 'ಗಾಡ್‌ಡ್ಯಾಮ್ನ್ ಪಾರ್ಟಿಕಲ್' ಎನ್ನುವುದನ್ನು 'ಗಾಡ್ ಪಾರ್ಟಿಕಲ್' ಎಂದು ಬದಲಾಯಿಸಿದರು. ತಮ್ಮ ಪುಸ್ತಕದ ಹೆಸರನ್ನು 'ದ ಗಾಡ್ ಪಾರ್ಟಿಕಲ್ : ಇಫ್ ಯುನಿವರ್ಸ್ ಇಸ್ ದ ಆನ್ಸರ್, ವಾಟ್ ಇಸ್ ದ ಕ್ವೆಶ್ಚನ್?' ಎಂದಿಟ್ಟರು. ಈ ಕಣವು ಗಾಡ್‌ನಷ್ಟೇ ವಿಸ್ಮಯಕಾರಿ, ಕೈಗೆ ಸಿಗದಂಥಾದ್ದು ಎನ್ನುವ ಭಾವನೆ ಪ್ರಕಾಶಕರಿಗೆ. ಆದರೆ, ಪುಸ್ತಕದ ತಿರುಳಿನಲ್ಲಿ ಅದನ್ನು 'ಗಾಡ್‌ಡ್ಯಾಮ್ನ್ ಪಾರ್ಟಿಕಲ್' ಎಂದು ಸಂಬೋಧಿಸುವುದನ್ನು ಲೇಖಕ ಲೆಡರ್‌ಮನ್ ಮರೆಯಲಿಲ್ಲ.

ಹಿಗ್ಸ್‌ಬೋಸಾನ್ ಎಂಬ ಕಣದ ಯಾವುದೇ ಗುಣಲಕ್ಷಣ, ಮಹತ್ವವನ್ನು ಸ್ವಲ್ಪವೂ ವಿವರಿಸದ ಗಾಡ್ ಪಾರ್ಟಿಕಲ್ ಎಂಬ ಹೆಸರನ್ನು ವಿಜ್ಞಾನಿಗಳಷ್ಟೇ ಅಲ್ಲ, ಪ್ರಮುಖ ಧಾರ್ಮಿಕ ಮುಖಂಡರೂ ಒಪ್ಪುವುದಿಲ್ಲ. ಹೆಸರಿನ ಜೊತೆ ಆಟವಾಡಿ ಹಾಸ್ಯ ಮಾಡುವುದೇಕೆ ಎಂಬುದು ಅವರ ಆಕ್ಷೇಪ. ಆದರೂ ಗಾಡ್ ಪಾರ್ಟಿಕಲ್ ಎಂಬ ಅಡ್ಡಹೆಸರಿನಿಂದಾಗಿ ಒಂದು ಮಹತ್ತರವಾದ ಉಪಕಾರವೂ ಆಗಿದೆ. ಅದೇನೆಂದರೆ, ಹಿಗ್ಸ್ ಬೋಸಾನ್ ಎಂದು ಕರೆಯಲ್ಪಡುವ ಪಾರ್ಟಿಕಲ್ ಬಗ್ಗೆ ತಿಳಿಯಲು ಎಷ್ಟು ಜನರಿಗೆ ಆಸಕ್ತಿ ಇರುತ್ತಿತ್ತೋ ಏನೋ! ಇದನ್ನು ಗಾಡ್ ಪಾರ್ಟಿಕಲ್ ಎಂದು ಕರೆದಿದ್ದಕ್ಕೆ ವಿಜ್ಞಾನಿಗಳು, ಮೂಢನಂಬಿಕೆ ಉಳ್ಳವರು, ಅಪ್ಪಟ ಧಾರ್ಮಿಕ ಶ್ರದ್ಧೆ ಉಳ್ಳವರು, ನಾಸ್ತಿಕರೂ ಎಲ್ಲ ಬಗೆಯ ಲಕ್ಷಾಂತರ ಜನ ಇದರ ಕುರಿತು ತಿಳಿದುಕೊಳ್ಳುವ ಆಸಕ್ತಿಯನ್ನು ತೋರಿದ್ದಾರೆ. ಸರಿಯಾದ ಅರ್ಥ